ಆ. ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

ಇ. ಅಧಿಕೃತ ಮರಳು ಗುತ್ತಿಗೆ ಪಡೆದವರೂ ಸಹ ಮಿತಿ ಮೀರಿ ಲಾರಿಗಳಲ್ಲಿ ಲೋಡ್ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಇಲಾಖೆಯಲ್ಲಿ ಸಿಬ್ಬಂದಿ ಸಂಖ್ಯೆ ಕಡಿಮೆ ಇರುವುದರಿಂದ ತಪಾಸಣೆ ನಡೆಸಲು ಸಾಧ್ಯವಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ. ಇರುವ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ಇಲಾಖೆಗೆ ಅನುಮತಿ ನೀಡುವುದೇ;

ಊ. ಹೌದಾದಲ್ಲಿ, ಯಾವಾಗ ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು)

ಅ. ಬಂದಿದೆ.

ಆ. ಅಕ್ರಮ ಮರಳು ಗಣಿಗಾರಿಕೆ ತಡೆಗಟ್ಟಲು ಈ ಕೆಳಗಿನಂತೆ ಕ್ರಮವಹಿಸಿದೆ.

1. 31 ಮರಳು ನಿಕ್ಷೇಪಗಳನ್ನು ಗುರ್ತಿಸಿ ಹರಾಜು ಮಾಡಲು ಅಧಿಸೂಚನೆ ಜಾರಿ ಮಾಡಿದೆ.

2. ಈ ಪೈಕಿ 22 ಮರಳು ನಿಕ್ಷೇಪಗಳ 52-00 ಎಕರೆ ಪ್ರದೇಶವನ್ನು ಹರಾಜು ಮಾಡಲಾಗಿದ್ದು ಇದರಿಂದ 4.64 ಲಕ್ಷ ಹರಾಜು ಮೊತ್ತ ಸಂಗ್ರಹಿಸಲಾಗಿದೆ.

ಇ. ಹೌದು, 2004-05ನೇ ಸಾಲಿನಲ್ಲಿ ಮಿತಿಮೀರಿದ ಲೋಡ್ ಸಾಗಾಣಿಕೆಯ 8 ಪ್ರಕರಣಗಳನ್ನು ಪತ್ತೆಹಚ್ಚಿ, ರೂ.8,500 00 ದಂಡ ವಸೂಲು ಮಾಡಿದೆ.

ಈ. ಲಭ್ಯವಿರುವ ಸಿಬ್ಬಂದಿಯಿಂದಲೇ ಸತತವಾಗಿ ತಪಾಸಣೆ ಮಾಡುವ ಕಾರ್ಯ ನಿರ್ವಹಿಸಲಾಗುತ್ತಿದೆ.

ಉ. ಹೌದು, 28 ಭೂವಿಜ್ಞಾನಿಗಳ ಹುದ್ದೆಗಳ ಆಯ್ಕೆಗಾಗಿ ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಲಾಗಿದೆ.

ಊ. ಕರ್ನಾಟಕ ಲೋಕಸೇವಾ ಆಯೋಗಕ್ಕೆ ದಿನಾಂಕ : 11-01-2005 ರಲ್ಲಿ ಬರೆಯಲಾಗಿದೆ.

1586 (2188) ಶ್ರೀ ಜೀವರಾಜ್ ಡಿ.ಎನ್. ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಶೃಂಗೇರಿಯಿಂದ ಬೆಂಗಳೂರಿಗೆ ರಾತ್ರಿ ಹತ್ತೂವರೆ ಗಂಟೆಗೆ ಹೊರಟು ಕೊಪ್ಪ ಎನ್.ಆರ್.ಪುರ, ತರೀಕೆರೆ ಮಾರ್ಗವಾಗಿ ಬೆಂಗಳೂರು ತಲುಪುವಂತೆ ಒಂದು ರಾಜಹಂಸ ಸೇವೆಯನ್ನು ಒದಗಿಸಲು ಆ ಭಾಗದ ಜನತೆ ಬೇಡಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ. ಈ ಮಾರ್ಗವಾಗಿ ಬಸ್ ಸಂಚಾರ ಆರಂಭಿಸಲಾಗುವುದೇ ;

ಇ. ಹೌದಾದಲ್ಲಿ, ಯಾವಾಗ ಆರಂಭವಾಗುವುದು;

ಈ. ಶೃಂಗೇರಿ ಬಸ್ ನಿಲ್ದಾಣದ ಸಂಸ್ಥೆಯ ಮಾನ್ಯುಯಲ್ ಕೌಂಟರ್‌ನಲ್ಲಿ ಬೆಂಗಳೂರಿಗೆ ರಾತ್ರಿ ಹೊರಡುವ ಬಸ್‌ಗಳಿಗೆ ಕೇವಲ ನಾಲ್ಕು ಆಸನಗಳನ್ನು ಕಾಯ್ದಿರಿಸಲು ನಿಗದಿಪಡಿಸಿ ಉಳಿದ ಆಸನಗಳನ್ನು ಬೆಂಗಳೂರಿನ ಕಂಪ್ಯೂಟರ್ ಕೌಂಟರ್‌ಗೆ ನಿಗದಿಪಡಿಸಿರುವುದರಿಂದ, ಶೃಂಗೇರಿಯಿಂದ ಬೆಂಗಳೂರಿಗೆ ಬರುವ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಉ. ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

ಊ. ಶೃಂಗೇರಿಯಲ್ಲಿ ಕಂಪ್ಯೂಟರ್ ಮೂಲಕ ಮುಂಗಡ ಟಿಕೇಟ್ ಕಾಯ್ದಿರಿಸಲು ಕ್ರಮ ಕೈಗೊಳ್ಳಲಾಗಿದೆಯೇ ;

ಋ. ಹೌದಾದಲ್ಲಿ, ಯಾವಾಗಿನಿಂದ ಜಾರಿ ಮಾಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ. ಇಲ್ಲ.

ಆ. ಹೌದು.

ಇ. ಮೇ 2005

ಈ. ಇಲ್ಲ.

ಉ. ಉದ್ಭವಿಸುವುದಿಲ್ಲ.

ಊ. ಹೌದು

ಋ. 2005–06ರ ಸಾಲಿನಲ್ಲಿ.

1587 (1887) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು, ಎಂ ಎಲ್ ಎ (ಶಿವಾಜಿನಗರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬೆಂಗಳೂರು ನಗರದಲ್ಲಿ ಪ್ರತಿದಿನ ಸಂಚರಿಸುವ ಸರಾಸರಿ ವಾಹನಗಳೆಷ್ಟು ;

ಆ. ಬೆಂಗಳೂರು ಮಹಾನಗರ ಪಾಲಿಕೆ ಪ್ರತಿ ವರ್ಷ ಮೂಲಭೂತ ಸೆಸ್ ಅನ್ನು ದ್ವಿಚಕ್ರ, ತ್ರಿಚಕ್ರ, ನಾಲ್ಕು ಚಕ್ರ ಹಾಗೂ ಇತರ ವಾಹನಗಳಿಗೆ ವಿಧಿಸಲು ತೀರ್ಮಾನಿಸಿದೆಯೇ ;

ಇ. ಈ ಮೂಲಭೂತ ಸೆಸ್ ಅನ್ನು ಯಾವ ರೀತಿ ವಸೂಲು ಮಾಡಲಾಗುವುದು;

ಈ. ಇದರಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರತಿ ವರ್ಷ ಬರತಕ್ಕ ವರಮಾನವೆಷ್ಟು;

ಉ. ಈ ತೆರಿಗೆ ಅಥವಾ ಸೆಸ್ ವಿಧಿಸುವ ಉದ್ದೇಶವೇನು ;

ಊ. ಪ್ರತಿ ವರ್ಷ ವಾಹನ ತೆರಿಗೆ, ಆಕ್ಟ್ರಾಯ್ ವಸೂಲಿಯಲ್ಲಿ ಕಿರುಕುಳವಾಗುತ್ತಿದ್ದರಿಂದ ಇವುಗಳನ್ನು ರದ್ದುಗೊಳಿಸಿ, ವಾಹನ ತೆರಿಗೆಯನ್ನು ಲೈಫ್ ಟೈಮ್ ತೆರಿಗೆಯಾಗಿ ಪರಿವರ್ತಿಸಿರುವುದು ನಿಜವಲ್ಲವೇ ;

ಋ. ಪ್ರತಿದಿನ ನಗರಕ್ಕೆ ಲಕ್ಷಾಂತರ ವಾಹನಗಳು ಬೇರೆ ರಾಜ್ಯಗಳಿಂದ, ಬೇರೆ ಜಿಲ್ಲೆಗಳಿಂದ ಬರುತ್ತಿದ್ದು ಅವುಗಳಿಗೂ ಈ ಸೆಸ್ ವಿಧಿಸಲಾಗುವುದೇ;

ೠ. ಈ ಸೆಸ್ ವಿಧಿಸುವುದರಿಂದ ನಾಗರೀಕರಿಗೆ ಕಿರುಕುಳವಾಗುವುದರಿಂದ ಇದನ್ನು ರದ್ದುಗೊಳಿಸಲು ಸರ್ಕಾರ ಆಲೋಚಿಸುತ್ತದೆಯೇ ?

ಶ್ರೀ ಧರಂಸಿಂಗ್ (ಮಾನ್ಯ ಮುಖ್ಯಮಂತ್ರಿಯವರು) :

ಅ. ಹಾಲಿ ಬೆಂಗಳೂರು ನಗರದಲ್ಲಿ 20,94,537 ವಿವಿಧ ವರ್ಗದ ವಾಹನಗಳು ನೊಂದಣಿಯಾಗಿ ಬಳಕೆಯಲ್ಲಿವೆ.

ಆ. ಹೌದು.

ಇ. ಈ ಉಪಕರವನ್ನು ದಿನಾಂಕ 01.04.2005 ರಿಂದ ಜಾರಿಗೆ ಬರುವಂತೆ, ಜಾರಿಗೆ ತರಲು ಉದ್ದೇಶಿಸಿದ್ದು, ಈ ಉಪಕರವನ್ನು ವಾಹನ ಮಾಲೀಕರಿಂದ ವಸೂಲಿ ಮಾಡಲು ಅಗತ್ಯ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ.